# “2011 ನೇ ವರುಷದ ಮೇ 21 ರಂದು ಭಾವಾವೇಶವುಂಟಾಗುವುದು ಎಂಬ ಭರವಸೆಯನ್ನು ನೀಡುವ ಮತ್ತೊಂದು ದೋಷಾತೀತವಾದ ಪುರಾವೆಯನ್ನು ದೇವರು ನೀಡಿದ್ದಾರೆ”

ನ್ಯಾಯನಿರ್ಣಯದ ದಿನದೊಂದಿಗೆ ಮತ್ತು ಜಗತ್ತಿನ ಅಂತ್ಯದೊಂದಿಗೆ ಕಾಕತಾಳೀಯವಾಗುವ 2011 ನೇ ವರುಷದಲ್ಲಿ ಭಾವಾವೇಶವುಂಟಾಗುವುದು ಎಂಬ ಒಂದು ಅದ್ಭುತವಾದ ಪುರಾವೆಯನ್ನು ದೇವರು ತಮ್ಮ ಹೆಚ್ಚಿನ ಕರುಣೆಯಿಂದ ನೀಡಿದ್ದಾರೆ. **“ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಎಂಬುದನ್ನು ಮಾತ್ರ ಮರೆಯಬೇಡಿರಿ.”** ಎಂದು ಎರಡನೆ ಪೇತ್ರನ ಅಧ್ಯಾಯ 3 ರಲ್ಲಿರುವ ಶ್ಲೋಕ 8 ರಲ್ಲಿರುವ ಸನ್ನಿವೇಶದಲ್ಲಿ ನೋಹನ ದಿನದ ಪ್ರವಾಹದತ್ತ ಮತ್ತು ಅಂತ್ಯದ ಸಮಯದಲ್ಲಿ ಜಗತ್ತಿನ ನಾಶನದತ್ತ ನಮಗೆ ಬೊಟ್ಟುಮಾಡಿಸುವರು ಎಂಬುದನ್ನು ನೆನಪಿನಲ್ಲಿಡಿ.

ಕ್ರಿಸ್ತಪೂರ್ವ 4990 ನೇ ವರುಷದಲ್ಲಿ ಪ್ರವಾಹ ಸಂಭವಿಸಿದೆ ಎಂಬುದನ್ನು ನಾವು ವರುಷಗಳ ಹಿಂದೆಯೆ ಕಲಿತಿದ್ದೇವೆ. ಕ್ರಿಸ್ತಶಕ 2011 ನೇ ವರುಷದಲ್ಲಿ ನ್ಯಾಯನಿರ್ಣಯದ ದಿನವು ಸಂಭವಿಸುವುದು ಎಂಬುದನ್ನು ಇತ್ತೀಚೆಗೆ ನಾವು ಕಲಿತಿದ್ದೇವೆ. ಕ್ರಿಸ್ತಪೂರ್ವ 4990 ನೇ ವರುಷದ ನಂತರ ಕ್ರಿಸ್ತಶಕ 2011 ನೇ ವರುಷದವರೆಗೆ ನಿಖರವಾಗಿ ಏಳು ಸಾವಿರ ವರುಷಗಳಿರುವುದು.

ಪ್ರವಾಹ ಉಂಟಾಗುವ ಮೊದಲು, ಇನ್ನು ಏಳು ದಿವಸಗಳಲ್ಲಿ ಪ್ರವಾಹವು ಪ್ರಾರಂಭವಾಗುವುದು ಎಂಬುದನ್ನು ದೇವರು ನೋಹನಿಗೆ ಸೂಚಿಸಿದ್ದರು. (ಆದಿಕಾಂಡ ಅಧ್ಯಾಯ 7 ಶ್ಲೋಕ 4, ಮತ್ತು ಅಧ್ಯಾಯ 10 ಶ್ಲೋಕ16). ಎರಡನೆ ಪೇತ್ರನ ಅಧ್ಯಾಯ 3 ರ ಶ್ಲೋಕ 8 ರಲ್ಲಿ ಒಂದು ದಿನ ಅಂದರೆ ಸಾವಿರ ವರುಷಗಳು ಎಂಬ ಭಾಷೆಯನ್ನು ಬಳಸಿ, ಒಬ್ಬ ಧರ್ಮೋಪದೇಶಕನಾಗಿದ್ದ ನೋಹನನ್ನು ದೇವರು ಬಳಸಿ, “ಮನುಕುಲಕ್ಕೆ ನಾಶನದಿಂದ ತಪ್ಪಿಸಿಕೊಳ್ಳುವುದಕ್ಕೆ ಏಳು ದಿನಗಳು ಅಥವಾ ಏಳು ಸಾವಿರ ವರುಷಗಳಿವೆ” ಎಂಬುದನ್ನು ಎರಡನೆ ಪೇತ್ರನ ಅಧ್ಯಾಯ 5 ರಲ್ಲಿ ಘೋಷಿಸಿದ್ದಾರೆ. ನೋಹನು ಉಪದೇಶಿಸಿದ ಆ ಎಚ್ಚರಿಕೆಯ ನಂತರ ಕ್ರಿಸ್ತಶಕ 2011 ನೇ ವರುಷದವರೆಗೆ ನಿಖರವಾಗಿ ಏಳು ಸಾವಿರ ವರುಷಳಿರುವುದರಿಂದ, ನ್ಯಾಯನಿರ್ಣಯದ ದಿನವು 2011 ನೇ ವರುಷದಲ್ಲಿ ಉಂಟಾಗುವುದು ಎಂಬ ಅದ್ಭುತವಾದ ಒಂದು ಪುರಾವೆಯನ್ನು ದೇವರು ಮನುಕುಲಕ್ಕೆ ನೀಡಿದ್ದಾರೆ.

**“ಒಂದು ದಿನ ಅಂದರೆ ಸಾವಿರ ವರುಷಗಳು”** ಎಂಬ ಹೇಳಿಕೆಯನ್ನು ದೇವರು ದ್ವಿಗುಣಗೊಳಿಸಿ, ಇದು ದೇವರಿಂದ ಸ್ಥಾಪಿಸಲ್ಪಟ್ಟಿದೆ ಮತ್ತು ಶೀಘ್ರದಲ್ಲಿಯೇ ನೆರವೇರುವುದು ಎಂಬ ನಮ್ಮ ಭರವಸೆಯನ್ನು ಅತಿ ಹೆಚ್ಚಿಸಿದ್ದಾರೆ. (ಆದಿಕಾಂಡ ಅಧ್ಯಾಯ 41 ಶ್ಲೋಕ 32.

## ಮತ್ತೊಂದು ಪುರಾವೆ

ದೇವರು ಅವರ ಕರುಣೆಯಿಂದ ಮತ್ತೊಂದು ಅದ್ಭುತವಾದ ಪುರಾವೆಯನ್ನು ನೀಡಿದ್ದಾರೆ. ಅದು ಈ ರೀತಿಯಾಗಿದೆ:

ನಮ್ಮ ಪ್ರಸ್ತುತ ಆಧುನಿಕ ಪಂಚಾಂಗಗೊಂದಿಗೆ ಸುಸಂಘಟಿತಗೊಳಿಸುವಾಗ ಕ್ರಿಸ್ತಶಕ 33 ರ ಎಪ್ರಿಲ್ 1 ಶಿಲುಬೆಯ ನಿಖರವಾದ ದಿನಾಂಕವೆಂಬುದನ್ನು ನಾವು ಕಲಿತಿದ್ದೇವೆ. ಕ್ರಿಸ್ತಶಕ 33 ರ ಎಪ್ರಿಲ್ 1 ನೇ ದಿನಾಂಕ ಮಾತ್ರ ಬೈಬಲಿನ ಎಲ್ಲಾ ಅಗತ್ಯಗಳನ್ನು ಪೂರೈಸುವುದು ಅಂದರೆ ಶುಕ್ರವಾರವಾಗಿದ್ದು ಸುಗ್ಗೀಹಬ್ಬದ ಸರಿಯಾದ ದಿನಾಂಕವಾಗಿದೆ ಮತ್ತು ಆ ದಿನದಂದು ಕ್ರಿಸ್ತರನ್ನು ಶಿಲುಬೆಗೆ ಹಾಕಲಾಗಿತ್ತು.

ಭಾವಾವೇಶಗೊಳ್ಳುವ ದಿನಾಂಕದೊಂದಿಗೆ ನ್ಯಾಯನಿರ್ಣಯದ ಮೊದಲ ದಿನದ ದಿನಾಂಕವು ಕಾಕತಾಳೀಯವಾಗಿದೆ ಎಂಬುದನ್ನು ಕೂಡ ಕೆಲವು ಸಮಯದ ಹಿಂದೆ ನಮಗೆ ತಿಳಿದಿದೆ. ಅದು 2011 ನೇ ವರುಷದ ಮೇ 21. ಆದರೆ, ಕ್ರಿಸ್ತಶಕ 33 ನೇ ವರುಷದ ಎಪ್ರಿಲ್ 1 ರಿಂದ 2011 ನೇ ವರುಷದ ಮೇ 21 ರ ವರೆಗೆ ನಿಖರವಾಗಿ 722500 ದಿವಸಗಳಿರುವುದು ಎಂಬುದನ್ನು ನಾವು ಶೋಧಿಸಿದ್ದೇವೆ. ಮತ್ತು 2011 ನೇ ವರುಷದ ಮೇ 21 ಭಾವಾವೇಶದ ದಿನಾಂಕ ಮತ್ತು ಅದು ನ್ಯಾಯನಿರ್ಣಯದ ದಿನದ ಪ್ರಾರಂಭ ಎಂಬ ವಾಸ್ತವಕ್ಕೆ ಇದು ನಮಗೆ ಮತ್ತೊಂದು ದೋಷಾತೀತ ಮತ್ತು ನಿಖರವಾದ ಪುರಾವೆಯನ್ನು ನೀಡುತ್ತದೆ.

ಈ ಪುರಾವೆಯ ಪ್ರಾಮುಖ್ಯತೆಯಿಂದ ಮತ್ತು ಅದ್ಭುತತೆಯಿಂದ ಇದನ್ನು ಬೆಳೆಸುವುದಕ್ಕೆ ನಾವು ಸಮಯವನ್ನು ತೆಗೆದುಕೊಂಡೆವು. ಮೊದಲು, ಒಂದು ದಿನದಿಂದ ಮತ್ತೊಂದು ದಿನಕ್ಕೆ ಇರುವ ದಿನಗಳ ಸಂಖ್ಯೆಗಳನ್ನು ಹೆಚ್ಚು ನಿಖರತೆಯೊಂದಿಗೆ ಮತ್ತು ಸ್ಪಷ್ಟತೆಯೊಂದಿಗೆ ತಿಳಿದುಕೊಳ್ಳಲು ನಮಗೆ ಸಾಧ್ಯವಾಗುವುದು ಎಂಬುದನ್ನು ನಾವು ಕಲಿಯಲೇಬೇಕು, ಒಂದು ವರುಷದಲ್ಲಿ ಒಂದು ಕ್ಷಣದಿಂದ ಮತ್ತೊಂದು ಯಾವುದೇ ವರುಷದ ಅದೇ ಕ್ಷಣಕ್ಕೆ ಇರುವ ಸ್ಪಷ್ಟವಾದ ದಿನಗಳ ಸಂಖ್ಯೆಯನ್ನು ಪಡೆಯುವುದಕ್ಕೆ ಖಗೋಳಶಾಸ್ತ್ರಜ್ಞರು ಒಂದು ಪೂರ್ಣ ವರುಷಕ್ಕೆ 365.2422 ದಿವಸಗಳಿವೆ ಎಂಬುದನ್ನು ಬಹಳ ಹಿಂದೆಯೇ ಶೋಧಿಸಿದ್ದಾರೆ ಎಂಬುದನ್ನು ನಾವು ಮನಗಾಣಲೇಬೇಕು. ಅದಕ್ಕಾಗಿಯೇ ನಮ್ಮ ಆಧುನಿಕ ಪಂಚಾಂಗದಲ್ಲಿ ಅನುಕ್ರಮವಾಗಿ ಬರುವ ಮೂರು ವರುಷಗಳಲ್ಲಿ ಪ್ರತೀ ವರುಷದಲ್ಲಿ 365 ದಿವಸಗಳಿರುವವು. ಹೀಗಿದ್ದರೂ, ಪ್ರತೀ ನಾಲ್ಕನೇ ವರುಷಕ್ಕೆ 366 ದಿವಸಗಳಿರುವುದು. ಇದನ್ನು ಆ ವರುಷದ ಪೆಭ್ರುವರಿ ತಿಂಗಳಿಗೆ ಒಂದು ದಿನವನ್ನು ಸೇರಿಸುವುದರ ಮೂಲಕವಾಗಿ ಮಾಡಲಾಗಿದೆ. ಹಾಗಾಗಿ, ನಾಲ್ಕು ವರುಷಗಳಿಗೆ ಸರಾಸರಿಯಾಗಿ 365.25 ದಿವಸಗಳಿರುವುದು. ಆದರೆ 0.25, 0.2422 ಕ್ಕಿಂತ ದೊಡ್ಡದು. ಆದ್ದರಿಂದ, ನಿಖರತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಪಂಚಾಂಗದಲ್ಲಿ ಪ್ರತೀ 128 ವರುಷಗಳಿಂದ ಒಂದು ದಿನವನ್ನು ಬಿಟ್ಟುಬಿಡಲಾಗಿದೆ.

ಆದ್ದರಿಂದ, ಅವುಗಳೆರಡರ ನಡುವೆ ಇರುವ ನಿಖರವಾದ ದಿನಾಂಕಗಳನ್ನು ತಿಳಿದುಕೊಳ್ಳುವುದಕ್ಕೆ ನಾವು ಏನು ಮಾಡಬೇಕೆಂದರೆ ಎರಡು ಘಟನೆಗಳನ್ನು 365.2422 ರಿಂದ ಬೇರ್ಪಡಿಸಿ, ವರುಷಗಳ ಸಂಖ್ಯೆಗಳನ್ನು ಗುಣಿಸಬೇಕು. ಹಾಗಾಗಿ, ಕ್ರಿಸ್ತಶಕ 33 ರ ಎಪ್ರಿಲ್ 1 ರಿಂದ 2011 ನೇ ವರುಷದ ಎಪ್ರಿಲ್ 1 ರವರೆಗೆ ಅಲ್ಲಿ 2011 ರಿಂದ 33 ನ್ನು ಕಳೆದಾಗ ನಿಖರವಾಗಿ 1978 ವರುಷಗಳಿರುವುದು ಮತ್ತು ಪ್ರತೀ ವರುಷಕ್ಕೆ 365.2422 ದಿವಸಗಳಿರುವುದು. ಅದು 722449 ದಿವಸಗಳಿಗೆ ಸಮನಾಗಿರುವುದು. ಮೊದಲ ದಿನ ಮತ್ತು ಕೊನೆಯ ದಿನವನ್ನು ಸೇರಿಸಿ 2011 ನೇ ವರುಷದ ಎಪ್ರಿಲ್ 1 ರಿಂದ 2011 ನೇ ವರುಷದ ಮೇ 21 ರವರೆಗೆ 51 ದಿವಸಗಳಿರುವುದು. ಈ 51 ದಿವಸಗಳನ್ನು 722449 ಕ್ಕೆ ಕೂಡಿಸಿದಾಗ, ಅದು ಕ್ರಿಸ್ತಶಕ 33 ರ ಎಪ್ರಿಲ್ 1 ರಿಂದ 2011 ನೇ ವರುಷದ ಮೇ 21 ರವರೆಗೆ ಎರಡೂ ದಿನಗಳನ್ನು ಸೇರಿಸಿ, 722500 ದಿವಸಗಳನ್ನು ನಮಗೆ ನೀಡುವುದು. ಈ ಸಂಖ್ಯೆಯು ಹೆಚ್ಚು ಮಹತ್ವದ್ದುಳ್ಳದ್ದಾಗಿದೆ. ಅದು ಯಾಕೆ ಎಂಬುದನ್ನು ಈಗ ನಾವು ನೋಡಲಿದ್ದೇವೆ.

## ಬೈಬಲಿನಲ್ಲಿರುವ ಕೆಲವು ಸಂಖ್ಯೆಗಳು ಆಧ್ಯಾತ್ಮಿಕ ಸತ್ಯಗಳನ್ನು ಮನವರಿಕೆ ಮಾಡುತ್ತವೆ.

ಸಾಹಿತ್ಯದ ಬಳಕೆಯಲ್ಲಿ ಪದಗಳು ಮೇಲ್ನೋಟಕ್ಕೆ ಕಾಣಿಸದಿದ್ದರೂ ಕೂಡ ಕೆಲವೊಮ್ಮೆ ಆಧ್ಯಾತ್ಮಿಕ ಸತ್ಯವನ್ನು ಮನವರಿಕೆ ಮಾಡುವುದಕ್ಕೆ ದೇವರು ಒಂದು ರೀತಿಯಲ್ಲಿ ಪದಗಳನ್ನು ಬಳಸುತ್ತಾರೆ. ಉದಾಹರಣೆಗೆ, “ಕುರಿ” ಎಂಬ ಪದವು ಪದೇಪದೆಯಾಗಿ ಕ್ರಿಸ್ತರು ಕುರಿ ಎಂಬುದರತ್ತ ಬೊಟ್ಟು ಮಾಡಿ ತೋರಿಸುತ್ತದೆ. “ಪರ್ವತ” ಎಂಬ ಪದ ಯಾವಾಗಲೂ “ರಾಜ್ಯ”ವನ್ನು ಪ್ರತಿನಿಧಿಸುತ್ತದೆ, “ಹೊಲ” ಎಂಬ ಪದ “ಜಗತ್ತ”ನ್ನು ಮಹತ್ವೀಕರಿಸುತ್ತದೆ “ರಕ್ತ” ಎಂಬ ಪದವು ಕ್ರಿಸ್ತರು ತಮ್ಮ ಬದುಕನ್ನು ನೀಡುವುದನ್ನು ಮತ್ತು “ಯೆರೂಸಲೇಮ್” ಪದೇಪದೆಯಾಗಿ “ದೇವರ ರಾಜ್ಯ”ವನ್ನು ಪ್ರತಿನಿಧಿಸುತ್ತದೆ. ಹಾಗೆಯೇ, ಬೈಬಲಿನಲ್ಲಿರುವ ಕೆಲವು ಸಂಖ್ಯೆಗಳು ಪದಗಳಂತೆ ಬರೆಯಲ್ಪಟ್ಟಿವೆ ಹೊರತು ಸಂಖ್ಯಾವಾಚಕವಾಗಿ ಅಲ್ಲ ಮತ್ತು ಪದೇ ಪದೆಯಾಗಿ ಆಧ್ಯಾತ್ಮಿಕ ಸತ್ಯದತ್ತ ಬೊಟ್ಟುಮಾಡಿ ತೋರಿಸುತ್ತದೆ. ಇದಕ್ಕೆ ಉದಾಹರಣೆಯಾಗಿ, ನಾವು ಆ ಸಂಖ್ಯೆಗಳನ್ನು ನೋಡಲಿದ್ದೇವೆ ಮತ್ತು ಅವುಗಳು ಆಧ್ಯಾತ್ಮಿಕ ಸತ್ಯದ ಮಹತ್ವದತ್ತ ಕೇಂದ್ರೀಕೃತವಾಗಿವೆ. ಆ ಸಂಖ್ಯೆಗಳು, ಮೂರು, ಐದು, ಹತ್ತು, ಹದಿನೇಳು ಮತ್ತು ಇಪ್ಪತ್ತ ಮೂರು.

ಸಂಖ್ಯೆ ಮೂರು ದೇವರ ಉದ್ದೇಶವನ್ನು ಮಹತ್ವೀಕರಿಸುತ್ತದೆ. ಕ್ರಿಸ್ತರನ್ನು ಶಿಲುಬೆಗೆ ಹಾಕಲಾಯಿತು ಎಂಬುದನ್ನು ಬೈಬಲ್ ಬರೆಯುವಾಗ, ಸಂಖ್ಯೆ ಮೂರು ಅದರ ಬಗ್ಗೆ ಹದಿನೈದು ಸಾರಿ ಗಮನ ಸೆಳೆದಿದೆ. ಮೂರು ಶಿಲುಬೆಗಳು ಮತ್ತು ಉದ್ಯಾನವನದಲ್ಲಿ ಮೂರು ಮಂದಿ ಅಪೊಸ್ತಲರು ಏಸುವಿನ ಜೊತೆಗಿದ್ದರು ಮತ್ತು ಪೇತ್ರನಿಂದ ನಿರಾಕರಿಸಲ್ಪಟ್ಟವರು ಮೂರು ಮಂದಿ ಮುಂತಾದವುಗಳು. ಮತ್ತು ಈ ಎಲ್ಲಾ ಮೂರು ಕ್ರಿಸ್ತರನ್ನು ಶಿಲುಬೆಗೆ ಹಾಕುವುದು ಖಂಡಿತವಾದ ದೇವರ ಉದ್ದೇಶವಾಗಿತ್ತು ಎಂಬುದಕ್ಕೆ ಒತ್ತುಕೊಡುತ್ತವೆ.

ಸಂಖ್ಯೆ ಐದು, ಪ್ರಾಯಶ್ಚಿತ್ತವನ್ನು ಅಥವಾ ಪಾಪವಿಮೋಚನೆಯನ್ನು ಮಹತ್ವೀಕರಿಸುತ್ತದೆ ಅಂದರೆ ಕ್ರಿಸ್ತರು ಯಾರನ್ನು ಸಂಚಯಿತರನ್ನಾಗಿ ಮಾಡುವರೋ ಅವರ ಪಾಪಗಳಿಗೆ ಅವರು ಪ್ರಾಯಶ್ಚಿತ್ತ ಮಾಡಿಕೊಂಡರು ಎಂದರ್ಥ. ಉದಾಹರಣೆಗೆ, ಅರ್ಧ ರೂಪಾಯಿಯನ್ನು ನೀಡುವುದು ಪ್ರಾಯಶ್ಚಿತ್ತದತ್ತ ಬೊಟ್ಟುಮಾಡಿಸುವಂತೆ ಕಾಣುತ್ತದೆ. ವಿಮೋಚನಾಕಾಂಡದ ಅಧ್ಯಾಯ 30 ರಲ್ಲಿರುವ ಶ್ಲೋಕ 15 ಘೋಷಿಸುತ್ತದೆ”

**“ಪ್ರಾಣರಕ್ಷಣೆಯ ಕಷ್ಟವನ್ನು ಯೆಹೋವನಿಗೆ ಕೊಡುವದರಲ್ಲಿ ಐಶ್ಚರ್ಯವಂತರು ಅರ್ಧ ರೂಪಾಯಿಗಿಂತ ಹೆಚ್ಚು ಕೊಡಬಾರದು; ಬಡವರು ಕಮ್ಮಿ ಕೊಡಬಾರದು.”**

ಪಾಪ ವಿಮೋಚನೆಯ ಒಂದು ಚಿತ್ರಣವಾಗಿ, ಅರಣ್ಯಕಾಂಡದಲ್ಲಿರುವ ಅಧ್ಯಾಯ 3 ರ 47 ಮತ್ತು 48 ಶ್ಲೋಕಗಳಲ್ಲಿ ಇಪ್ಪತ್ತು ಗೇರಾ ತೂಕದ ರೂಪಾಯಿಯಿಂದ ಪ್ರದರ್ಶಿಸಲ್ಪಟ್ಟಿದೆ.

**“ದೇವರ ಸೇವೆಗೆ ನೇಮಕವಾದ ಇಪ್ಪತ್ತು ಗೇರಾ ತೂಕದ ರೂಪಾಯಿಯ ಮೇರೆಗೆ ತೆಗೆದುಕೊಳ್ಳಬೇಕು. ಆ ಹೆಚ್ಚಾಗಿರುವವರ ಬಿಡುಗಡೆಗೋಸ್ಕರ ಅವರು ಕೊಡುವ ಹಣವನ್ನು ನೀನು ಆರೋಹನಿಗೂ ಅವನ ಮಕ್ಕಳಿಗೂ ಕೊಡಬೇಕು ಅಂದನು.”**

ಸಂಖ್ಯೆ 10 ಅಥವಾ 100 ಅಂದರೆ 10 ಗುಣಿಸು10 ಅಥವಾ 1000 ಅಂದರೆ 100 ಗುಣಿಸು 10 ಪೂರ್ಣತೆಯನ್ನು ಮಹತ್ವೀಕರಿಸುತ್ತದೆ. ಉದಾಹರಣೆಗೆ, ಬೈಬಲ್ ಕೆಲವು ನಿರ್ದಿಷ್ಟ ಭಾಗಗಳಲ್ಲಿ ಹತ್ತು ನಾಣ್ಯಗಳ ಅಥವಾ ನೂರು ಕುರಿಗಳ ಅಥವಾ ಸಾವಿರ ವರುಷಗಳ ಬಗ್ಗೆ ಮಾತನಾಡುತ್ತದೆ. ಪ್ರಕಟಣೆಯ ಅಧ್ಯಾಯ 20 ರಲ್ಲಿರುವ ಶ್ಲೋಕ 2 ಮತ್ತು 3 ರಲ್ಲಿ ಸೈತಾನನನ್ನು 1000 ವರುಷಗಳವರೆಗೆ ಬಂಧನದಲ್ಲಿಡಲಾಯಿತು ಎಂದು ದೇವರು ಮಾತನಾಡುತ್ತಾರೆ. ಹೀಗಿದ್ದರೂ, ಹೆಚ್ಚಿನ ಬೈಬಲಿನ ಮಾಹಿತಿಗಳಿಂದ, ಅವನನ್ನು ಕ್ರಿಸ್ತಶಕ 33 ರ ಮತ್ತು ಕ್ರಿಸ್ತಶಕ 1988 ರ ನಡುವೆ ಬಂಧನದಲ್ಲಿಡಲಾಯಿತು ಎಂಬುದು ನಮಗೆ ತಿಳಿಯುವುದು. ಆ ನಿಜವಾದ 1955 ವರುಷಗಳು ಒಂದು ಸಾವಿರ ವರುಷಗಳಿಂದ ಸಾಂಕೇತಿಸಲ್ಪಟ್ಟಿದೆ. ದೇವರ ಯೋಜನೆಯನ್ನು ಪೂರ್ಣಗೊಳಿಸುವುದಕ್ಕಾಗಿ ಅವನನ್ನು ಬಂಧನದಲ್ಲಿಡಲಾಯಿತು ಎಂಬುದನ್ನು ಮಹತ್ವೀಕರಿಸಲು ಅವನನ್ನು ಸಾವಿರ ವರುಷಗಳವರೆಗೆ ಬಂಧನದಲ್ಲಿಡಲಾಯಿತು ಎಂದು ಬೈಬಲ್ ಹೇಳುತ್ತದೆ ಮತ್ತು ನಿಜವಾಗಿಯೂ ಆ ಸಮಯವು 1955 ವರುಷಗಳಾಗಿತ್ತು.

ಸಂಖ್ಯೆ 17 ಪದೇಪದೆಯಾಗಿ “ಪರಲೋಕ”ವನ್ನು ಮಹತ್ವೀಕರಿಸುತ್ತದೆ. ಉದಾಹರಣೆಗೆ, ಬಾಬಲಿನ ರಾಜನಿಂದ ಯೂದಾಯ ಮತ್ತು ಯೆರೂಸಲೇಮ್ ನಾಶವಾಯಿತು ಎಂಬುದನ್ನು ಯೆರೆಮೀಯಾನ ಪುಸ್ತಕದಲ್ಲಿ ದೇವರು ವಿವರಿಸುತ್ತಾರೆ. ಮತ್ತು ಅದು ಕ್ರೈಸ್ತ ದೇವಾಲಯ ಯುಗದ ಅಂತ್ಯವನ್ನು ಪ್ರತಿನಿಧಿಸುತ್ತದೆ ಮತ್ತು ಆ ಸಮಯದಲ್ಲಿ, ಕ್ರೈಸ್ತ ದೇವಾಲಯಗಳಲ್ಲಿ ಆಡಳಿತನಡೆಸುತ್ತಿದ್ದ ಸೈತಾನನನ್ನು ಬಾಬೆಲಿನ ರಾಜನು ಯೆರೂಸಲೇಮ್ ಮತ್ತು ಯೂದಾಯವನ್ನು ನಾಶಪಡಿಸುವುದನ್ನು ಪ್ರತಿನಿಧಿಸುತ್ತಾನೆ. 17 ಬೆಳ್ಳಿಯ ನಾಣ್ಯಗಳಿಗೆ ಒಂದು ಗದ್ದೆಯನ್ನು ಕೊಂಡುಕೊಳ್ಳುವಂತೆ ಯೆರೆಮೀಯಾನಿಗೆ ಸೂಚನೆನೀಡಲಾಯಿತು ಎಂಬುದು ಹತಾಶೆಯ ಸಂದರ್ಭದಂತೆ ಕಾಣುತ್ತದೆ. 17 ನಾಣ್ಯಗಳಿಗೆ ಆ ಭೂಮಿಯನ್ನು ಕೊಂಡುಕೊಳ್ಳುವುದು ಇಸ್ರಾಯೇಲ್ಯರು ಮತ್ತೊಮ್ಮೆ ಯೆರೂಸಲೇಮ್ ನ್ನು ವಶಪಡಿಸಿಕೊಳ್ಳುವ ಸಮಯವು ಬರುವುದಕ್ಕೆ ಒಂದು ಖಚಿತತೆ ಅಥವಾ ಒಂದು ಪ್ರದರ್ಶನ ಎಂಬುದಾಗಿ ದೇವರು ಯೆರೆಮೀಯಾನಿಗೆ ಸೂಚಿಸಿದ್ದಾರೆ. ಅಂದರೆ, ಜನರು ಮತ್ತೊಮ್ಮೆ ಪರಲೋಕಕ್ಕೆ ಹೋಗುವರು ಎಂದರ್ಥ. ಯೆರೆಮೀಯಾನ ಅಧ್ಯಾಯ 32 ರಲ್ಲಿ 7 ರಿಂದ17 ರವರೆಗಿನ ಶ್ಲೋಕಗಳನ್ನು ನೋಡಿ:

ಸಂಖ್ಯೆ 23 ನಾಶನದತ್ತ ಬೊಟ್ಟುಮಾಡಿತೋರಿಸುತ್ತದೆ. ಇದನ್ನು ಕನಿಷ್ಠಪಕ್ಷ ಬೈಬಲಿನ ಎರಡು ಮಹತ್ವದ ಉಲ್ಲೇಖಗಳಲ್ಲಿ ಪ್ರದರ್ಶಿಸಲಾಗಿದೆ. ಒಂದು ಉಲ್ಲೇಖವು ಇಸ್ರಾಯೇಲ್ಯರು ಅನ್ಯಜನಾಂಗದ ಬಾಲ್ಪೆಯರ್ ಎಂದು ಕರೆಯಲ್ಪಡುವ ಮೂರ್ತಿಯನ್ನು ಪೂಜಿಸಲು ಪ್ರಾರಂಭಿಸಿರುವುದರಿಂದ ದೇವರು ಅವರ ಮೇಲೆ ನಾಶನದ ಸಾಂಕ್ರಾಮಿಕ ರೋಗವನ್ನು ತಂದರು ಎಂಬುದನ್ನು ದಾಖಲಿಸಿದೆ. ಅರಣ್ಯಕಾಂಡದ ಅಧ್ಯಾಯ 25 ರಲ್ಲಿರುವ ಶ್ಲೋಕ 9 ರಲ್ಲಿ ದೇವರು ಶಿಕ್ಷೆಯನ್ನು ದಾಖಲಿಸಿದ್ದಾರೆ:

**“ಆ ವ್ಯಾಧಿಯಿಂದ ಇಪ್ಪತ್ತನಾಲ್ಕು ಸಾವಿರ ಮಂದಿ ಸತ್ತರು.”**

ಮಾರ್ಮಿಕವಾಗಿ, ಹೊಸ ಒಡಂಬಡಿಕೆಯಲ್ಲಿ ಅದೇ ರೋಗದ ಉಲ್ಲೇಖವನ್ನು ಬೈಬಲ್ ಮಾಡಿದೆ, ಒಂದನೆ ಕೊರಿಂಥದವರ ಅಧ್ಯಾಯ 10 ರಲ್ಲಿರುವ ಶ್ಲೋಕ 8 ರಲ್ಲಿ ನಾವು ಓದುತ್ತೇವೆ:

**“ಅವರಲ್ಲಿ ಕೆಲವರು ಜಾರತ್ವ ಮಾಡಿ ಒಂದೇ ದಿನದಲ್ಲಿ ಇಪ್ಪತ್ತಮೂರು ಸಾವಿರ ಮಂದಿ ಸತ್ತರು; ನಾವು ಜಾರತ್ವ ಮಾಡದೆ ಇರೋಣ.”**

ಹಳೆ ಒಡಂಬಡಿಕೆಯಲ್ಲಿ 24000 ಮತ್ತು ಹೊಸ ಒಡಂಬಡಿಕೆಯಲ್ಲಿ 23000 ನಾಶವನ್ನು ದೇವರು ವರದಿ ಮಾಡಿರುವುದನ್ನು ಗಮನಿಸಿ. ಅದೊಂದು ವಿರೋಧಾಭಾಸವಲ್ಲ. ಒಟ್ಟು 24000 ಜನರು ನಾಶವಾದರು, ಅದರಲ್ಲಿ 23000 ಜನರು ಒಂದು ದಿನದಲ್ಲಿ ನಾಶವಾದರು. ಅದು ನಾಶನದೊಂದಿಗಿನ ಸಂಖ್ಯೆಯ ಹೊಂದಾಣಿಕೆಯನ್ನು ಎತ್ತಿ ತೋರಿಸುತ್ತದೆ.

ದೇವರ ಕಡುಕೋಪದೊಂದಿಗೆ ಹೊಂದಾಣಿಕೆಯಾಗುವ ಸಂಖ್ಯೆ 23 ಕ್ಕೆ ಮತ್ತೊಮ್ಮೆ ಒತ್ತುಕೊಟ್ಟಿರುವುದು ದಾನಿಯೇಲನ ಅಧ್ಯಾಯ 8 ರಲ್ಲಿ ಕಂಡುಬರುತ್ತದೆ. ಅಲ್ಲಿ ದೇವರು ಒಂದು

ಸಮಯದ ಬಗ್ಗೆ ಮಾತನಾಡುತ್ತಾರೆ ಮತ್ತು ಅದು 2300 ದಿವಸಗಳವರೆಗೆ ಮುಂದುವರಿಯುವ ಮಹಾಕ್ಲೇಶದ ಮೊದಲ ಭಾಗವೆಂಬುದು ನಮಗೆ ತಿಳಿದಿದೆ ಮತ್ತು ಆ ಸಮಯದಲ್ಲಿ ಎಲ್ಲಾ ಕ್ರೈಸ್ತ ದೇವಾಲಯಗಳ ಮೇಲೆ ಮತ್ತು ಜಗತ್ತಿನ ಮೇಲೆ ಸೈತಾನನು ಆಡಳಿತ ನಡೆಸುವನು ಮತ್ತು ಅವರನ್ನು ಮತ್ತು ಜಗತ್ತನ್ನು ನ್ಯಾಯನಿರ್ಣಯದ ದಿನಕ್ಕೆ ಸಿದ್ಧತೆಮಾಡುವಾಗ ದೇವರು ಕ್ರೈಸ್ತ ದೇವಾಲಯಗಳ ಮೇಲೆ ನಾಶನವನ್ನು ತರಲು ಪ್ರಾರಂಭಿಸುವರು. ದಾನಿಯೇಲನ ಅಧ್ಯಾಯ 8 ರಲ್ಲಿರುವ ಶ್ಲೋಕ 13 ಮತ್ತು14 ರಲ್ಲಿ ನಾವು ಓದುತ್ತೇವೆ:

**"ಆಗ ಒಬ್ಬ ದೇವದೂತನು ಮಾತಾಡುವದನ್ನು ಕೇಳಿದೆನು; ಮಾತಾಡುವವನನ್ನು ಮತ್ತೊಬ್ಬ ದೇವದೂತನು ಸಂಬೋಧಿಸಿ – ನಿತ್ಯಹೋಮವನ್ನು ನಿಲ್ಲಿಸುವದು, ಪವಿತ್ರಾಲಯವನ್ನೂ ದೇವಭಕ್ತಗಣಗಳನ್ನೂ ತುಳಿಯುವದು ಎಂಬ ಕನಸಿನ ಕಾರ್ಯಗಳು ಎಷ್ಟು ಕಾಲ ನಡೆಯುವವು ಎಂದು ಪ್ರಶ್ನೆ ಮಾಡಲು ಅವನು ಇವನಿಗೆ – ಉದಯಾಸ್ತಮಾನಗಳ ಎರಡು ಸಾವಿರ ಮುನ್ನೂರರವರೆಗೆ ನಡೆಯುವವು; ಅನಂತರ ಪವಿತ್ರಾಲಯಕ್ಕೆ ಪುನ: ನ್ಯಾಯಸ್ಥಾಪನೆಯಾಗುವದು ಎಂದು ಹೇಳಿದನು."**

ಈ ಉಲ್ಲೇಖಗಳಿಂದ ದೇವರ ಉದ್ದೇಶವು ಸಂಖ್ಯೆ ಮೂರರೊಂದಿಗೆ ಗುರುತಿಸಲ್ಪಡುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು, ಸಂಖ್ಯೆ ಐದು ಪ್ರಾಯಶ್ಚಿತ್ತದೊಂದಿಗೆ ಅಥವಾ ಪಾಪ ವಿಮೋಚನೆಯೊಂದಿಗೆ, ಸಂಖ್ಯೆ ಹತ್ತು ಪೂರ್ಣತೆಯೊಂದಿಗೆ, ಸಂಖ್ಯೆ ಹದಿನೇಳು ಪರಲೋಕದೊಂದಿಗೆ ಮತ್ತು ಸಂಖ್ಯೆ ಇಪ್ಪತ್ತ ಮೂರು ನ್ಯಾಯನಿರ್ಣಯದೊಂದಿಗೆ ಅಥವಾ ನಾಶನದೊಂದಿಗೆ ಗುರುತಿಸಲ್ಪಡುತ್ತದೆ.

## ಸಂಖ್ಯೆಗಳು, ಪದಗಳ ಹಾಗೆ, ಕಥೆಗಳನ್ನು ಹೇಳುವುದು

ವೈಯಕ್ತಿಕ ಪದಗಳು ನಮಗೆ ಆಧ್ಯಾತ್ಮಿಕ ಅರ್ಥವನ್ನು ನೀಡುತ್ತವೆ. ಒಂದು ನಿರ್ದಿಷ್ಟ ಭಾಗದಲ್ಲಿ ನೀಡಲ್ಪಟ್ಟ ಮಾಹಿತಿಗೆ ಹೆಚ್ಚು ಒತ್ತುಕೊಟ್ಟಿದ್ದರೆ, ಆಧ್ಯಾತ್ಮಿಕ ಅರ್ಥವಿರುವ ಸಂಖ್ಯೆಗಳು ಅದೇ ಭಾಗದಲ್ಲಿ ಅಥವಾ ಅದೇ ರೀತಿಯಾದ ಸಂದರ್ಭದಲ್ಲಿ ಕಂಡುಬರುತ್ತದೆ. ಉದಾಹರಣೆಗೆ, ಎರಡನೆ ಕೊರಿಂಥದವರ ಅಧ್ಯಾಯ 2 ರಲ್ಲಿರುವ ಶ್ಲೋಕ 15 ಮತ್ತು16 ರಲ್ಲಿ ನಾವು ಓದುತ್ತೇವೆ:

**"ರಕ್ಷಣಮಾರ್ಗದಲ್ಲಿರುವವರಲ್ಲಿಯೂ ನಾಶನಮಾರ್ಗದಲ್ಲಿರುವವರಲ್ಲಿಯೂ ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ. ನಾವು ನಾಶನಮಾರ್ಗದಲ್ಲಿರುವವರಿಗೆ ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿಯೂ ಇದ್ದೇವೆ. ಇಂಥ ಕಾರ್ಯಗಳಿಗೆ ಯಾರು ಯೋಗ್ಯರು?"**

ಈ ಎರಡು ಶ್ಲೋಕಗಳಲ್ಲಿ ಜೀವಿಸುತ್ತಿರುವ ಜನರು ದೇವರ ಕಾನೂನಾದ ಸುವಾರ್ತೆಯನ್ನು ಕೇಳುವ ಪರಿಣಾಮವನ್ನು ದೇವರು ವಿವರಿಸುತ್ತಾರೆ. ಅದು ಎರಡರಲ್ಲಿ ಒಂದು ಪ್ರಭಾವವನ್ನುಂಟುಮಾಡುವುದು. ಇದು ಕೇಳುಗರಿಗೆ ನಿರಂತರ ಬದುಕು ಮತ್ತು ಪರಲೋಕವನ್ನುಂಟುಮಾಡುವುದಕ್ಕೆ ದೇವರು ಬಳಸಲ್ಪಡುವುದು. ಅಥವಾ ದೇವರ ಕಡುಕೋಪವನ್ನು ತರುವುದು ಯಾಕೆಂದರೆ ದೇವರ ಪದವನ್ನು ಕೇಳುವವರು ದೇವರ ಕಾನೂನಿನ ವಿರುದ್ಧ ದಂಗೆಯಲ್ಲಿ ಮುಂದುವರಿಯುವರು.

ರಕ್ಷಣೆಯನ್ನು ತರುವ ಅಥವಾ ನ್ಯಾಯನಿರ್ಣಯವನ್ನು ತರುವ ಸುವಾರ್ತೆಯು ಜಗತ್ತಿಗೆ ಸುವಾರ್ತೆಯನ್ನು ತರುತ್ತಿದ್ದ ಕ್ರೈಸ್ತ ದೇವಾಲಯಗಳು ಇದ್ದ ಒಟ್ಟು ಸಂಖ್ಯೆಯ ವರುಷಗಳಲ್ಲಿ ಗುಪ್ತವಾಗಿದ್ದುದು ಕುತೂಹಲಕಾರಿಯಾಗಿದೆ. ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳುವುದಕ್ಕೆ ಕ್ರಿಸ್ತರು ಹೇಗೆ ಯಾತನೆಪಟ್ಟರು ಮತ್ತು ಸತ್ತರು ಎಂಬುದನ್ನು ಶಿಲುಬೆಯ ಸಮಯದಲ್ಲಿ ಕ್ರಿಸ್ತರು ಪ್ರದರ್ಶಿಸಿದ ಕೂಡಲೆ ಕ್ರೈಸ್ತ ದೇವಾಲಯ ಯುಗ ಪ್ರಾರಂಭವಾಯಿತು ಎಂಬುದನ್ನು ನಾವು ಕಲಿತಿದ್ದೇವೆ. ಅದು ಕ್ರಿಸ್ತಶಕ 33 ನೇ ವರುಷದಲ್ಲಿ. ಕ್ರಿಸ್ತಶಕ 33 ರ ಮೇ 22 ರ ಸುಗ್ಗಿಹಬ್ಬದಂದು ಕ್ರೈಸ್ತ ದೇವಾಲಯ ಯುಗವು ಅಧಿಕೃತವಾಗಿ ಪ್ರಾರಂಭವಾಯಿತು ಎಂಬುದನ್ನು ನಾವು ಕಲಿತಿದ್ದೇವೆ. 1988 ನೇ ವರುಷದ ಮೇ 21 ರಂದು ಕ್ರೈಸ್ತ ದೇವಾಲಯ ಯುಗವು ಅಂತ್ಯಕ್ಕೆ ಬರುವವರೆಗೆ ಅದು ನಿಖರವಾಗಿ 1955 ವರುಷಗಳವರೆಗೆ ಮುಂದುವರಿಯಿತು.

ಸಂಖ್ಯೆ 1955 ಮೂರು ಮಹತ್ವದ ಸಂಖ್ಯೆಗಳನ್ನುಂಟುಮಾಡುವುದು ಮತ್ತು ಪ್ರತಿಯೊಂದು ಸಂಖ್ಯೆಗೂ ಹೆಚ್ಚಿನ ಆಧ್ಯಾತ್ಮಿಕ ಅರ್ಥ ಇರುವುದು. ಸಂಖ್ಯೆ ಐದನ್ನು 17 ರಿಂದ ಗುಣಿಸಿ ಬರುವ ಗುಣಲಬ್ಧಕ್ಕೆ 23 ರಿಂದ ಗುಣಿಸಿದಾಗ 1955 ಬರುವುದು. ಆದ್ದರಿಂದ, ಮೇಲೆ ಉಲ್ಲೇಖಿಸಿರುವ, ಸಂಖ್ಯೆ 5 ಅಂದರೆ ಪ್ರಾಯಶ್ಚಿತ್ತ ಅಥವಾ ಪಾಪ ವಿಮೋಚನೆ; ಸಂಖ್ಯೆ 17 ಪರಲೋಕವನ್ನು ತರುವುದು ಮತ್ತು ಸಂಖ್ಯೆ 23 ದೇವರ ಕಡುಕೋಪವನ್ನು ಅಥವಾ ನಾಶನವನ್ನು ತರುವುದು ಎಂದು ಎರಡನೆ ಕೊರಿಂಥದವರ ಅಧ್ಯಾಯ 2 ರಲ್ಲಿರುವ ಶ್ಲೋಕ 15 ಮತ್ತು 16 ರಲ್ಲಿ ಈ ಸಂಖ್ಯೆಗಳ ಮೂಲಕ ಆಧ್ಯಾತ್ಮಿಕ ಸಂದೇಶವನ್ನು ದೇವರು ಘೋಷಿಸಿದಂತೆ ಪ್ರತಿಧ್ವನಿಸುತ್ತದೆ.

ಎರಡನೆಯ ಮಹತ್ವದ ನಿದರ್ಶನವನ್ನು ಯೋಹಾನ ಅಧ್ಯಾಯ 21 ರಲ್ಲಿ ನೀಡಲಾಗಿದೆ. ಆ ಸಂಧರ್ಭದಲ್ಲಿ ಅನುಯಾಯಿಗಳು ಬಲೆಯಲ್ಲಿ 153 ಹಿಡಿಯುವರು ಮತ್ತು ಬಲೆಯು ಹರಿಯುವುದಿಲ್ಲ ಮತ್ತು ಅದನ್ನು ಯಶಸ್ವಿಯಾಗಿ ದಡಕ್ಕೆ ತರಲಾಯಿತು. ಮಹಾಕ್ಲೇಶದ ಕೊನೆಯ 6100 ದಿವಸಗಳಲ್ಲಿ ನಿಜವಾದ ನಂಬಿಕೆಯುಳ್ಳವರ ಕೊನೆಯ ಕೊಯ್ಲಿನ ಅವಧಿಯಲ್ಲಿ ಸಂಚಯಿತರಾಗುವವರನ್ನೆಲ್ಲಾ ಆ 153 ಮೀನುಗಳು ಪ್ರತಿನಿಧಿಸುತ್ತವೆ ಎಂಬುದಾಗಿ ಅದು ಕಾಣಬಹುದು. ಮಾರ್ಮಿಕವಾಗಿ ಆ ಬಲೆಯು ಹರಿಯುವುದಿಲ್ಲ ಮತ್ತು ಅವರಲ್ಲಿ ಸುಳ್ಳು ನಂಬಿಕೆಯುಳ್ಳವರಿರುವುದಿಲ್ಲ ಎಂಬುದನ್ನು ಅದು ಆಧ್ಯಾತ್ಮಿಕವಾಗಿ ಸೂಚಿಸುತ್ತದೆ. ಆ ಮೀನುಗಳು ನಿಜವಾದ ನಂಬಿಕೆಯುಳ್ಳವರನ್ನು ಮಾತ್ರ ಪ್ರತಿನಿಧಿಸುತ್ತವೆ. ನ್ಯಾಯನಿರ್ಣಯದ ದಿನದ ಸ್ವಲ್ಪ ಮೊದಲು ಅಂತ್ಯವಾದ ಕ್ರೈಸ್ತ ದೇವಾಲಯ ಯುಗದ ನಂತರ ಅಗಣಿತ ಸಂಖ್ಯೆಯ ಜನರು ಸಂಚಯಿತರಾಗುವರು. ಆದುದರಿಂದ, ಪ್ರತಿಯೊಬ್ಬರೂ ತಮ್ಮ ರಕ್ಷಣೆಯ ಪೂರ್ಣತೆಯನ್ನು ಪಡೆಯುವರು ಎಂಬುದು ದೇವರ ಉದ್ದೇಶವಾಗಿದೆ ಎಂದು ಇದು ಖಾತರಿಪಡಿಸುತ್ತದೆ ಮತ್ತು ಅವರನ್ನು ಪರಲೋಕಕ್ಕೆ ಕೊಂಡೊಯ್ಯಲಾಗುವುದು.

ಸಂಖ್ಯೆ 153, ಮೂರು ಗುಣಿಸು ಮೂರು ಗುಣಿಸು ಹದಿನೇಳು ಎಂಬ ಮೂರು ಮಹತ್ವದ ಸಂಖ್ಯೆಗಳನ್ನು ಉಂಟುಮಾಡುತ್ತದೆ. ಮಹಾಕ್ಲೇಶದ ಕೊನೆಯ ದಿನಗಳಲ್ಲಿ ಸಂಚಯಿತರಾಗುವವರು ಎಂಬುದನ್ನು, ಸಂಖ್ಯೆ ಮೂರು ಎಂಬುದು ದೇವರ ಉದ್ದೇಶವನ್ನು, ಸಂಖ್ಯೆ ಹದಿನೇಳು ಎಂಬುದು ಪರಲೋಕಕ್ಕೆ ಕೊಂಡೊಯ್ಯುವುದು ಎಂದು ಆ ಸಂಖ್ಯೆಗಳು ನಿದರ್ಶಿಸುತ್ತವೆ. ದೇವರ ಉದ್ದೇಶದ ಸಂಖ್ಯೆಯಾಗಿರುವ ಸಂಖ್ಯೆ 3 ನ್ನು ದ್ವಿಗುಣಗೊಳಿಸಿರುವುದು, ಅದು ದೇವರಿಂದ ಸ್ಥಾಪಿಸಲ್ಪಟ್ಟಿದೆ ಮತ್ತು ದೇವರು ಅದನ್ನು ಶೀಘ್ರದಲ್ಲಿಯೆ ನೆರವೇರಿಸುವರು ಎಂಬುದನ್ನು ತೋರಿಸುತ್ತದೆ. ಆದಿಕಾಂಡದ ಅಧ್ಯಾಯ 41 ರಲ್ಲಿರುವ ಶ್ಲೋಕ 32 ನ್ನು ನೋಡಿ. ಆದ್ದರಿಂದ, ಒಂದೇ ಭಾಗದಲ್ಲಿ ಅಥವಾ ಅಂಥದೇ ಸಂದರ್ಭಗಳಲ್ಲಿ ಬರೆಯಲ್ಪಟ್ಟ ಪದದೊಂದಿಗೆ ದೇವರು ಸಂಖ್ಯೆಗಳನ್ನು ಹೇಗೆ ಆಧ್ಯಾತ್ಮಿಕವಾಗಿ ಪ್ರೋತ್ಸಾಹಿಸಿದ್ದಾರೆ ಎಂಬುದನ್ನು ನಾವು ನೋಡುವೆವು.

## ಸಂಖ್ಯೆ 722500 ರ ಬಗ್ಗೆ ಏನು?

ಕ್ರಿಸ್ತರನ್ನು ಶಿಲುಬೆಗೆ ಹಾಕಿದ್ದು ಮತ್ತು ಅವರು ಮರಣಹೊಂದಿದ ವರುಷವಾದ ಕ್ರಿಸ್ತಶಕ 33 ಎಪ್ರಿಲ್ 1 ರಿಂದ ದೇವರ ರಕ್ಷಣೆ ಯೋಜನೆ ಒಟ್ಟಾಗಿ ಪೂರ್ಣಗೊಳ್ಳುವ ಮತ್ತು ನಿಜವಾದ ನಂಬಿಕೆಯುಳ್ಳವರೆಲ್ಲರೂ ಪರಲೋಕಕ್ಕೆ ಒಯ್ಯಲ್ಪಡುವ ಅಥವಾ ಭಾವಾವೇಶಗೊಳ್ಳುವ ದಿನವಾದ 2011 ನೇ ವರುಷದ ಮೇ 21 ರವರೆಗಿರುವ 722500 ದಿವಸಗಳಿಗೆ ಈಗ ನಾವು ತಿರುಗಿ ಹೋಗುವ.

ಸಂಖ್ಯೆ 722500 ಎಂಬುದು ಒಂದೇ ತೆರನಾದ ಮಹತ್ವದ ಸಂಖ್ಯೆಗಳಾಗಿ ಎರಡು ಜೋಡಿಯಾಗುವುದು. ಪ್ರತಿಯೊಂದು ಸಂಖ್ಯೆಯು ದೇವರ ರಕ್ಷಣೆಗೆ ಯೋಜನೆಗೆ ನಿಕಟವಾಗಿ ಹೊಂದಿಕೊಳ್ಳುವುದು.

<u>5 ಗುಣಿಸು 10 ಗುಣಿಸು 17</u> ಗುಣಿಸು <u>5 ಗುಣಿಸು 10 ಗುಣಿಸು 17</u> ಅಂದರೆ 722,500

ಕ್ರಿಸ್ತಶಕ 33 ರ ಎಪ್ರಿಲ್ 1 ರಂದು ಕ್ರಿಸ್ತರ ಯಾತನೆ ಮತ್ತು ಮರಣದಿಂದ ಪ್ರದರ್ಶಿಸಲ್ಪಟ್ಟ <u>ಪ್ರಾಯಶ್ಚಿತ್ತ</u> ಅಥವಾ <u>ಪಾಪ ವಿಮೋಚನೆ</u> ಸಂಖ್ಯೆ ಐದು ಆಗಿದೆ ಮತ್ತು 2011 ನೇ ವರುಷದ ಮೇ 21 ರಂದು ಅದು ನೂರು ಪ್ರತಿಶತ ಪೂರ್ಣಗೊಳ್ಳುವುದು ಅದು ಸಂಖ್ಯೆ ಹತ್ತು ಮತ್ತು ಪರಲೋಕಕ್ಕೆ ಹೋಗುವುದಕ್ಕೆ ನಿಜವಾದ ನಂಬಿಕೆಯುಳ್ಳವರೆಲ್ಲರೂ ಭಾವಾವೇಶಗೊಳ್ಳುವರು ಅದು ಸಂಖ್ಯೆ ಹದಿನೇಳು. ಈ ಸಂಖ್ಯೆಯ ಸರಣಿಯು ದ್ವಿಗುಣಗೊಂಡಿರುವುದು ಅದನ್ನು ದೇವರು ಸ್ಥಾಪಿಸಿದ್ದಾರೆ ಮತ್ತು ಅತಿ ಶೀಘ್ರದಲ್ಲಿ ನೆರವೇರುವುದು ಎಂಬುದನ್ನು ಸೂಚಿಸುವುದಕ್ಕೆ ನಮ್ಮ ಗಮನವನ್ನು ಸೆಳೆಯುತ್ತದೆ. ಆದಿಕಾಂಡ ಅಧ್ಯಾಯ 41 ರಲ್ಲಿರುವ ಶ್ಲೋಕ 32.

ಪ್ರಿಯ ಓದುಗರೇ, ನಾವು ಈಗ ತಾನೆ ಏನನ್ನು ಕಲಿತೆವೋ ಅದರಿಂದ ನಾವು ಖಂಡಿತವಾಗಿಯೂ ಆಶ್ಚರ್ಯಪಡಲೇಬೇಕು. ನಾವು ಕಲಿತಿರುವ ಈ ಎಲ್ಲಾ ವಿಷಯಗಳು ಸತ್ಯ ಯಾಕೆಂದರೆ ಈ ವಿಶ್ವವನ್ನು ಸೃಷ್ಟಿಸಿದ ಅದೇ ದೇವರು ಇತಿಹಾಸದ ಕಾಲದಕ್ರಮಾನುಗತಿಯನ್ನು ಸ್ಪಷ್ಟವಾಗಿ ಯೋಜನೆ ಮಾಡಿದ ದೇವರೇ ಆಗಿದ್ದಾರೆ. ಮಂಗಳ ಗ್ರಹಕ್ಕೆ ರಾಕೆಟನ್ನು ಕಳುಹಿಸಲು ಅನುಮತಿ ನೀಡುವ ಸ್ವಾಭಾವಿಕ ಕಾನೂನುಗಳು ಹೇಗೆ ಖಂಡಿತವಾಗಿ ನಂಬಿಕಾರ್ಹವಾಗಿವೆ ಮತ್ತು ಸತ್ಯವಾಗಿವೆ ಅಥವಾ ಈ ಎಲ್ಲಾ ಪ್ರಕೃತಿಯನ್ನು ನೋಡಿಕೊಳ್ಳುವ ಕಾನೂನುಗಳು ಹೇಗೆ ನಂಬಿಕಾರ್ಹವಾಗಿವೆ ಮತ್ತು ಸತ್ಯವಾಗಿವೆಯೋ ಹಾಗೆಯೇ ದೇವರ ಕಾಲದಕ್ರಮಾನುಗತಿಯನ್ನು ವಿಕಸನಗೊಳಿಸುವ ಕಾನೂನುಗಳು ನಂಬಿಕಾರ್ಹವಾಗಿವೆ ಮತ್ತು ಸತ್ಯವಾಗಿವೆ.

ಸಂಪೂರ್ಣವಾಗಿ ಬೈಬಲಿನ ಮಾಹಿತಿಯ ಆಧಾರದ ಮೇಲಿರುವ ಈ ಆಶ್ಚರ್ಯದ ಸ್ವಭಾವದ ಪುರಾವೆಯ ಬಗ್ಗೆ ನಾವು ಹೆಚ್ಚಿನ ಟಿಪ್ಪಣಿಯನ್ನು ಮಾಡಲೇಬೇಕು.

1. ಕ್ರಿಸ್ತಶಕ 33 ರ ಎಪ್ರಿಲ್ 1 ನೇ ದಿನಾಂಕಕ್ಕೆ ದೇವರು ನಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ ನಮ್ಮ ಪಾಪಗಳಿಗೆ ವಿಮೋಚನೆ ಮಾಡಿಕೊಳ್ಳುವುದಕ್ಕೆ ಕ್ರಿಸ್ತರು ಹೇಗೆ ಸತ್ತರು ಎಂಬುದನ್ನು ಶಿಲುಬೆಯಲ್ಲಿ ಪ್ರದರ್ಶಿಸಿದ ದಿನಾಂಕ ಅದಾಗಿದೆ. ಸಂಖ್ಯೆ ಐದನ್ನು ಆ ದಿನದ ಮೇಲೆ ಗಮನವನ್ನು ನೀಡುವುದಕ್ಕೆ ದೇವರು ಬಳಸಿದ್ದಾರೆ, ಮತ್ತು ಸಾಕಷ್ಟು ಮಟ್ಟಿಗೆ ಅದು ಆಧ್ಯಾತ್ಮಿಕವಾಗಿ ವಿಮೋಚನೆಯನ್ನು ಮಹತ್ವೀಕರಿಸುತ್ತದೆ.

2. ನಿಜವಾದ ನಂಬಿಕೆಯುಳ್ಳವರು ನಿರಂತರವಾದ ಬದುಕು ಇರುವ ಪುನರುತ್ಥಾನಗೊಂಡ ದೇಹಗಳನ್ನು ಪಡೆಯುವ ಸಮಯದಲ್ಲಿ ನಮ್ಮ ರಕ್ಷಣೆಯು ಸಂಪೂರ್ಣ ಪೂರ್ಣಗೊಳ್ಳುವುದು. 2011 ನೇ ವರುಷದ ಮೇ 21 ರ ಭಾವಾವೇಶದ ದಿನದಂದು ಅದೇ ಸಂಭವಿಸುವುದು. ಆದ್ದರಿಂದ, ಕ್ರಿಸ್ತಶಕ 33 ರ ಎಪ್ರಿಲ್ 1 ರಿಂದ 2011 ನೇ ವರುಷದ ಮೇ 21 ರವರೆಗೆ ಎರಡೂ ದಿನಗಳನ್ನು ಸೇರಿಸುವಾಗ ಆ ಸಮಯದಿಂದ ನಮ್ಮ ರಕ್ಷಣೆಯು ಹೇಗೆ ನೆರವೇರಿದೆ ಎಂಬುದನ್ನು ದೇವರು ತೋರಿಸುವಾಗ ನಮ್ಮ ರಕ್ಷಣೆಯು ಸಂಪೂರ್ಣವಾಗಿ ಪೂರ್ಣಗೊಂಡಿದೆ ಎಂಬ ಸಮಯವಾಗಿದೆ. ಮತ್ತು ಅದು ಪೂರ್ಣತೆಯನ್ನು ಮಹತ್ವೀಕರಿಸುವ ನಿಖರವಾದ ಸಂಖ್ಯೆ ಹತ್ತರೊಂದಿಗೆ ಕಾಕತಾಳೀಯವಾಗಿದೆ.

3. ಭಾವಾವೇಶದ ದಿನಾಂಕವಾದ 2011 ನೇ ವರುಷದ ಮೇ 21 ರಂದು ಸಂಚಯಿತನಾದ ಪ್ರತಿಯೊಬ್ಬ ವ್ಯಕ್ತಿಯೂ ಪರಲೋಕಕ್ಕೆ ಹೋಗುವನು ಯಾಕೆಂದರೆ ಒಟ್ಟಾರೆಯಾಗಿ ಅವನ ರಕ್ಷಣೆಯು ಪೂರ್ಣಗೊಂಡಿರುವುದು. ಸಂಖ್ಯೆ ಹದಿನೇಳು ಸರಿಯಾಗಿಯೇ ಹೊಂದಿಕೊಳ್ಳುತ್ತದೆ ಯಾಕೆಂದರೆ, ಅದಕ್ಕೆ ಆಧ್ಯಾತ್ಮಿಕ ಅರ್ಥವಿರುವಾಗ ಅದು ಪರಲೋಕವನ್ನು ಪ್ರತಿನಿಧಿಸುತ್ತದೆ.

4. ಐದು ಗುಣಿಸು ಹತ್ತು ಗುಣಿಸು ಹದಿನೇಳು ಎಂಬ ಸಂಖ್ಯೆಗಳು ದ್ವಿಗುಣಗೊಳ್ಳುವಾಗ ಅದು ಆ ಪುರಾವೆಗಳ ಸತ್ಯವು ದೇವರಿಂದ ಸ್ಥಾಪಿಸಲ್ಪಟ್ಟಿದೆ ಮತ್ತು ಅದು ಶೀಘ್ರದಲ್ಲಿ ನೆರವೇರುವುದು ಎಂಬ "ಒಂದು ದಿನ ಅಂದರೆ ಸಾವಿರ ವರುಷಗಳು" ಎಂಬ ನುಡಿಗಟ್ಟನ್ನು ದ್ವಿಗುಣ ಗೊಳಿಸಿದ ಹಾಗೆ. ನ್ಯಾಯನಿರ್ಣಯದ ದಿನವು ನಿಖರವಾಗಿ ನೋಹನ ಕಾಲದ ನಂತರ ನಿಖರವಾದ 7000 ವರುಷಗಳು ಎಂಬುದನ್ನು ನಿಖರವಾಗಿ ಭರವಸೆಯನ್ನು ನೀಡುವುದಕ್ಕೆ ದೇವರು ದ್ವಿಗುಣಗೊಳಿಸುವ ತತ್ವವನ್ನು ಬಳಸಿದ ಹಾಗೆ, 2011 ನೇ ವರುಷದ ಮೇ 21 ರ ದಿನಾಂಕ ಕೂಡ ನಿಖರವಾಗಿ ನಿರ್ದಿಷ್ಟವಾಗಿದೆ ಎಂಬುದಕ್ಕೆ ಹೆಚ್ಚಿನ ಖಚಿತತೆಯನ್ನು ನೀಡುವುದಕ್ಕೆ ಈ ದ್ವಿಗುಣಗೊಳಿಸುವ ತತ್ವವನ್ನು ದೇವರು ಬಳಸಿರುವುದು ಆಶ್ಚರ್ಯದ ಸಂಗತಿಯಲ್ಲವೆ.

ನಿಜವಾಗಿಯೂ, 2011 ನೇ ವರುಷದಲ್ಲಿ ನ್ಯಾಯನಿರ್ಣಯದ ದಿನದ ಪ್ರಾರಂಭದೊಂದಿಗೆ ಭಾವಾವೇಶವು ಸಂಭವಿಸುವುದು ಎಂಬ ನಿಖರವಾದ ಸತ್ಯಕ್ಕೆ ಸಂಬಂಧಪಟ್ಟ ಈ ಎಲ್ಲಾ ಅಶ್ಚರ್ಯದ ಮಾಹಿತಿಗಳಿರುವ ಬೈಬಲಿನ ಎದುರಿಗೆ ವಿರೋಧಿಸಲು ಯಾರಿಗಾದರು ಧೈರ್ಯ ಹೇಗೆ ಬಂದೀತು.

> ಜಗತ್ತಿನ ಅಂತ್ಯದ ವಿಚಾರವಾಗಿ ನೀವು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಉಚಿತ ಪುಸ್ತಕಗಳಿಗಾಗಿ ಫ್ಯಾಮಿಲೀ ರೇಡಿಯೋ,ಓಕ್ ಲ್ಯಾಂಡ್, ಕ್ಯಾಲಿಪೋರ್ನಿಯಾ 94621, ಯುಎಸ್ ಎ ಇಲ್ಲಿಗೆ ಬರೆಯಲು ಅಥವಾ ಅದನ್ನು ಅವಲೋಕಿಸಲು ನಮ್ಮ ವೆಬ್ ಸೈಟ್ www.familyradio.com: ಅನ್ನು ನೋಡಲು ನಿಮ್ಮನ್ನು ಆಮಂತ್ರಿಸುತ್ತೀದ್ದೇವೆ.
>
> **ಐ ಹೋಪ್ ಗಾಡ್ ವಿಲ್ ಸೇವ್ ಮಿ**
> **ವಿ ಆರ್ ಅಲ್ ಮೋಸ್ಟ್ ದೇರ್!**
> **ಟು ಗಾಡ್ ಬಿ ದಿ ಗ್ಲೋರಿ!**

ನೀವು ಓದಿರುವ ಈ ವಿಷಯದಲ್ಲಿ ನಿಮಗೆ ಏನಾದರೂ ಪ್ರಶ್ನೆಗಳಿದ್ದರೆ ಅಥವಾ ನಿಮಗೆ ಜಗತ್ತಿನಾದ್ಯಂತ ಪ್ರಸರಣಗೊಳ್ಳುವ ಉಚಿತ ತರಾಂಗಾಂತರದ ಶೆಡ್ಯೂಲ್ ನಿಮಗೆ ಬೇಕಿದ್ದಲ್ಲಿ, ದಯವಿಟ್ಟು ಇಲ್ಲಿಗೆ ಬರೆಯಿರಿ:

**ಫ್ಯಾಮಿಲೀ ರೇಡಿಯೋ**
**ಓಕ್ ಲ್ಯಾಂಡ್, ಕ್ಯಾಲಿಪೋರ್ನಿಯಾ 94621**
**ಯುಎಸ್ ಎ**

ಅಂತರ್ ಜಾಲದಲ್ಲಿ: **http://www.familyradio.com**
ಇ-ಮೇಲ್: **International@familyradio.com**

ಫ್ಯಾಮಿಲೀ ರೇಡಿಯೋವು ಜಗತ್ತಿನಾದ್ಯಾಂತ 50 ಭಾಷೆಗಳಲ್ಲಿ ಪ್ರಸಾರ ಮಾಡುತ್ತಿದೆ.

ಫ್ಯಾಮಿಲೀ ರೇಡಿಯೋವು ಒಂದು ಬೈಬಲ್ ಆಧಾರಿತ ಕ್ರಿಶ್ಚಿಯನ್ ರೇಡಿಯೋ ಧರ್ಮಪ್ರಚಾರಕ ಸಂಸ್ಥೆಯಾಗಿದ್ದು ಇದು ಯಾವುದೇ ಚರ್ಚ್ ಗೆ ಒಳಪಟ್ಟಿಲ್ಲ.